ದಿನಾಂಕಃ 28/03/2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಾದ ಶ್ರೀ ಎಸ್.ಹೆಚ್.ಎಂ. ವಕೀಲರಿಂದಃ

ಪ್ರತಿವಾದಿ ನನಗೆ ಅಣ್ಣನಾಗಬೇಕು. ನಾವು ಒಟ್ಟು 4 ಜನ ಅಣ್ಣತಮ್ಮಂದಿರು. ಉಳಿದ ಇಬ್ಬರ ಹೆಸರು ಗೋಪಾಲ ಮತ್ತು ದೇವೇಗೌಡ. ನಾನು 1986 ರಲ್ಲಿ 12 ಗುಂಟೆ ಜಮೀನನ್ನು ಕೊಂಡುಕೊಂಡಿರುತ್ತೇನೆ. ನಾನು, ರಾಜೇಗೌಡ ಮತ್ತು ಕಾಳೇಗೌಡರವರು ಸೇರಿಕೊಂಡು ಒಟ್ಟು 35 ಜಮೀನನ್ನು ಕೊಂಡುಕೊಂಡಿರುತ್ತೇವೆ. ಸದರಿ ಜಮೀನನ್ನು ನನಗೆ 12 ಗುಂಟೆ ಮತ್ತು ಉಳಿದ ಇಬ್ಬರಿಗೆ ತಲಾ 11 1/2 ಗುಂಟೆಯಂತೆ ಹಂಚಿಕೊಂಡಿರುತ್ತೇವೆ. ಸದರಿ ಜಮೀನನ್ನು ನಾವುಗಳು 1987 ರಲ್ಲಿ ಹಂಚಿಕೊಂಡಿರುತ್ತೇವೆ. ಹಂಚಿಕೊಂಡ ನಂತರ ಅವರವರ ಜಮೀನನ್ನು ಅವರವರು ಪ್ರತ್ಯೇಕವಾಗಿ ಅನುಭೋಗಿಸಿಕೊಂಡು ಬರುತ್ತಿದ್ದಾರೆ ಎಂದರೆ ಸರಿ. ನಾನು ಈಗ 1 ವರ್ಷದ ಹಿಂದೆ ಖಾತೆಯನ್ನು ಮಾಡಿಸಿಕೊಂಡಿರುತ್ತೇನೆ. ಅದೇ ರೀತಿ ನಾವು ಮನೆಗಳನ್ನು ಪ್ರತ್ಯೇಕವಾಗಿ ಕಟ್ಟಿಕೊಂಡು ವಾಸವಾಗಿರುತ್ತೇವೆ. ಇದಲ್ಲದೇ ಬೇರೆ ನನಗೆ 10 ಗುಂಟೆ ಜಮೀನು ಇರುತ್ತದೆ. ಆ ಜಮೀನು ನನಗೆ ಖಾತೆಯಾಗಿರುವುದಿಲ್ಲ, ಆದರೆ ನನ್ನ ಹಿಸ್ಸೆಗೆ ಬಂದಿರುವುದಂದರಿ ನಾನು ಅನುಭೋಗಿಸಿಕೊಂಡು ಹೋಗುತ್ತಿದ್ದೇನೆ. ನನ್ನ ತಂದೆಯ ಪೌತಿಯ ನಂತರ ಅಂದರೆ ಸುಮಾರು 20 ವರ್ಷಗಳ ಹಿಂದೆ ನಾವು ವಿಭಾಗ ಮಾಡಿಕೊಂಡಿರುತ್ತೇವೆ. ಅಂದಿನಿಂದ ಇಂದಿನವರೆಗೂ ಪ್ರತ್ಯೇಕ ವಾಸ ಮತ್ತು ಅನುಭೋಗ ಮಾಡಿಕೊಂಡಿರುತ್ತೇವೆ. ಸಾಕ್ಷಿ ಮುಂದುವರೆದು ಕಣ್ಣು ಗುರುತಿನ ಆಧಾರದ ಮೇಲೆ ಅನುಭೋಗಿಸಿಕೊಂಡು ಬರುತ್ತಿದ್ದೇವೆ ಎಂದು ನುಡಿಯುತ್ತಾರೆ. ಖಾತೆಯಾದ ನಂತರ ಸರ್ವೆ ಮಾಡಿಸಿರುತ್ತೇನೆ. ಅಳತೆ ಮಾಡಿಸಿದ ನಂತರ ನನಗೆ ಒತ್ತುವರಿಯಾದ ಬಗ್ಗೆ ಗೊತ್ತಾಗಿರುತ್ತದೆ. 6 ಅಡಿ ಅಗಲ ಉದ್ದ 100 ಅಡಿಗಳಷ್ಟು ಜಾಗ ನನ್ನ ಅಣ್ಣದಿಂದ ಬಂದಿರುತ್ತದೆ. ನನ್ನ ಅಣ್ಣನು ಅನುಭೋಗಿಸುತ್ತಿದ್ದ ಒತ್ತುವರಿ ಜಮೀನಿನಲ್ಲಿ ಅಡಿಕೆ ಮರಗಳು ಇತ್ತು ಎಂದರೆ ಸರಿ. ನಮ್ಮ ಅಣ್ಣನ ಪೂರ್ತಿ ಹಿಸ್ಸೆಯಲ್ಲಿ ಅಡಿಕೆ ಮರಗಳು ಇತ್ತು ಎಂದರೆ ಸರಿ. ಸಾಕ್ಷಿ 3 ಪೊಟೋವನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಛಾಯ ಚಿತ್ರಗಳನ್ನು ನಿಡಿ1 ರಿಂದ ನಿಡಿ3 ಎಂದು ಗುರುತಿಸಲಾಯಿತು. ಸಿ.ಡಿ.ಯನ್ನು ನಿಡಿ3(ಎ) ಎಂದು ಗುರುತಿಸಲಾಯಿತು. ನಿಡಿ1 ರಲ್ಲಿ ಕಾಣುವ ಅಡಿಕೆ ಮರಗಳ ಇರುವ ಜಾಗವು ಪ್ರತಿವಾದಿಯ ಜಾಗ ಹಾಗೂ ಜೋಳ ಇರುವ ಜಾಗ ನನ್ನ ಜಾಗ ಎಂದರೆ ಸರಿ. ನಿಡಿ2 ರಲ್ಲಿ ಕಾಣುವ ಜೋಳದ ಜಮೀನಿನ ಪಕ್ಕದ ಜಾಗ ನನ್ನ ಮೊತ್ತಬ್ಬ ಅಣ್ಣನ ಜಾಗ ಎಂದರೆ ಸರಿ.

ನಿಪಿ3 ರಿಂದ 5 ರಲ್ಲಿ ಕಾಣುವ ಜಾಗವು ಹಾಗೂ ನಿಡಿ1 ರಿಂದ 3 ರಲ್ಲಿ ಕಾಣುವ ಜಾಗವು ಒಂದೇ ಎಂದರೆ ಸರಿ. ದಾವಾ ಆಸ್ತಿಗೆ ಸಂಬಂಧಿಸಿದಂತೆ ಪ್ರತಿವಾದಿಯ ವಿರುದ್ಧ ದೂರು ದಾಖಲಿಸಿರುತ್ತೇನೆ ಎಂದರೆ ಸರಿ. ನನಗೆ ಪೋಲೀಸ್ ಠಾಣೆಯಲ್ಲಿ ನ್ಯಾಯ ದೊರಕಿಸಿಕೊಡಲಿಲ್ಲ ಆದ್ದರಿಂದ ನಾನು ನ್ಯಾಯಾಲಯದಲ್ಲಿ ಸದರಿ ದಾವೆಯನ್ನು ಸಲ್ಲಿಸಿರುತ್ತೇನೆ. ಸಾಕ್ಷಿ ದೃಡೀಕೃತ 2 ಸ್ವೀಕೃತಿಗಳ ಮತ್ತು 2 ದೂರಗಳನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಗಳನ್ನು ನಿಡಿ4 ರಿಂದ ನಿಡಿ7

ಎಂದು ಗುರುತಿಸಲಾಯಿತು. ಪ್ರತಿವಾದಿಯು ಒತ್ತುವರಿ ಮಾಡಿಕೊಂಡಿರುವ ಜಾಗವನ್ನು ನನಗೆ ಬಿಟ್ಟು ಕೊಟ್ಟಿರುತ್ತಾರೆ. ಪ್ರತಿವಾದಿಯು ನನ್ನ ಜಾಗದಲ್ಲಿ ಇರುವ ಅಡಿಕೆ ಮರಗಳನ್ನು ಕಟಾವು ಮಾಡಿರುತ್ತಾರೆ ಆದ್ದರಿಂದ ನಾನು ಈ ದಾವೆಯಲ್ಲಿ ಪರಿಹಾರ ಕೋರಿ ದಾವೆಯನ್ನು ಸಲ್ಲಿಸಿರುತ್ತೇನೆ. ಅಡಿಕೆ ಮರಕ್ಕೂ ನನಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾವು ಸರಿಯಾಗಿ ಅಳತೆ ಮಾಡಿಸಿಕೊಳ್ಳದೇ ನನ್ನ ಜಮೀನು ಪ್ರತಿವಾದಿಗೆ, ಪ್ರತಿವಾದಿ ಜಮೀನು ಬೇರೆಯವರಿಗೆ ಹೋಗಿ ವ್ಯತ್ಯಾಸ ಆಗಿದೆ ಆದರೆ ಪ್ರತಿವಾದಿಯಿಂದ ಯಾವುದೇ ತೊಂದರೆ ಆಗಿಲ್ಲ ಎಂದರೆ ಸರಿಯಲ್ಲ.

ಊರಿನ ಗ್ರಾಮಸ್ಥರು ಪ್ರತಿವಾದಿಗೆ ಬುದ್ದಿವಾದ ಹೇಳಿ ಜಾಗವನ್ನು ನನಗೆ ಬಿಡಿಸಿಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಪ್ರತಿವಾದಿಯು ನನ್ನ ಜಾಗದಲ್ಲಿ ಇರುವ ಅಡಿಕೆ ಮರಗಳನ್ನು ಕಡಿದು ನನಗೆ ತೊಂದರೆ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಪ್ರತಿವಾದಿಗೆ ನಾನು ಹಠಮಾಡಿ ಸದರಿ ಜಾಗವನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. 1 ಸಾಲಿನಲ್ಲಿ 17 ಅಡಿಕೆ ಮರಗಳು ಇದ್ದವು. ಸದರಿ ಅಡಿಕೆ ಮರಗಳನ್ನು ನಾನು ಮತ್ತು ಪ್ರತಿವಾದಿ ಇಬ್ಬರು ಸಹ ಹಾಕಿದ್ದೇವು. ನಾನು ಯಾವುದೇ ಅಡಿಕೆ ಮರಗಳನ್ನು ನೆಟ್ಟಿರಲಿಲ್ಲ, ಪ್ರತಿವಾದಿಯು ನೆಟ್ಟಿರುವ ಅಡಿಕೆ ಮರಗಳನ್ನು ಆತ ಕಡಿದುಕೊಂಡು ನನಗೆ ಖಾಲಿ ಜಾಗವನ್ನು ಬಿಟ್ಟಿರುತ್ತಾನೆ ಎಂದರೆ ಸಾಕ್ಷಿಯು ನಾನು ನೆಟ್ಟಿರುವ ಅಡಿಕೆ ಮರಗಳನ್ನು ಪ್ರತಿವಾದಿಯು ಕಟಾವು ಮಾಡಿರುತ್ತಾನೆ ಎಂದು ನುಡಿಯುತ್ತಾರೆ. ನನ್ನ ಅನುಭವದಲ್ಲಿ ಯಾವುದೇ ಅಡಿಕೆ ಮರಗಳು ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಜಮೀನಿನ ಅಡಿಕೆ ಮರ ಇದ್ದ ಬಗ್ಗೆ ಸರ್ವೆ ಮಾಡಿಸಿ ಸ್ಕೆಚ್ ಅನ್ನು ಸಹ ಮಾಡಿಸಿರುತ್ತೇನೆ. ಸದರಿ ಸ್ಕೆಚ್ ಅನ್ನು ಅವಶ್ಯಕತೆ ಇದ್ದರೆ ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ. 8 ವರ್ಷದ ಅಡಿಕೆ ಮರಕ್ಕೆ ಸುಮಾರು 20 ಸಾವಿರ ಬೆಲೆ ಆಗುತ್ತದೆ. ಸದರಿ ಅಡಿಕೆ ಮರಕ್ಕೆ 2 ಸಾವಿರ ರೂ. ಗಳು ಸಹ ಬೆಲೆ ಬಾಳುವುದಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಅಡಿಕೆ ಮರಗಳನ್ನು ಬೆಳೆಯದೆ ಇದ್ದರೂ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಅಣ್ಣನನ್ನು ಬೆದರಿಸಿ ಇನ್ನೂ ಸ್ವಲ್ಪ ಜಮೀನು ಹೊಡೆದುಕೊಳ್ಳಬೇಕೆಂಬ ಉದ್ದೇಶದಿಂದ ಆತನ ವಿರುದ್ಧ ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಬೆಳೆಸಿದ ಅಡಿಕೆ ಮರಗಳನ್ನು ನನ್ನ ಅಣ್ಣ ಕಡಿದು ಹಾಕಿರುತ್ತಾನೆ ಎಂದು ಪೋಲೀಸ್ ಠಾಣೆಗೆ ದೂರು ನೀಡಿರುತ್ತೇನೆ.

(ಮರು ವಿಚಾರಣೆ ಇಲ್ಲ)

(ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸ.ಇ.

ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಹೊಳೆನರಸೀಪುರ